**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 567/2019**

**ಸಾಕ್ಷಿಗೆ ದಿನಾಂಕ 10.7.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾಃ ದಯಾನಂದ್ ಆರ್ | ಪಿ.ಡಬ್ಲ್ಯೂ-12 |
| ತಂದೆಯ/ಗಂಡನ ಹೆಸರು | : | ರುದ್ರಪ್ಪ | ಸಿ.ಡಬ್ಲ್ಯೂ-36 |
| ವಯಸ್ಸು | : | 38 | |
| ಉದ್ಯೋಗ | : | ಅಸೋಸಿಯೇಟ್ ಪ್ರೋಪೆಸರ್,ಮೈಸೂರು ಮೆಡಿಕಲ್ ಕಾಲೇಜು | |
| ವಾಸಸ್ಥಳ | : | ಮೈಸೂರು | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2013 ರಿಂದ ಈ ದಿನದವರೆಗೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಅಸೋಸಿಯೇಟ್ ಪ್ರೋಪೆಸರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ದಿನಾಂಕ 17.7.2018 ರಂದು ತಹಶೀಲ್ದಾರ್, ಹೆಚ್.ಡಿ.ಕೋಟೆ ರವರು ಸಲ್ಲಿಸಿದ ಕೋರಿಕೆಯ ಮೇರೆಗೆ ಮೃತ ನಾಗರಾಜು ಬಿನ್ ಲಿಂಗರಾಜು ರವರ ಶವದ ಪರೀಕ್ಷೆಯನ್ನು ಮದ್ಯಾಹ್ನ 2.05 ರಿಂದ 3.05 ರವರೆಗೆ ಸದರಿ ಮೃತ ಶವವನ್ನು ಅಂತಿಮ ಸಂಸ್ಕಾರ ಮಾಡಿದ್ದ ಕೋಹಳ ಗ್ರಾಮದಲ್ಲಿರುವ ಪಿರ್ಯಾದಿಯ ಜಮೀನಿನಲ್ಲಿ ನಡೆಸಿರುತ್ತೇನೆ. ಸದರಿ ಮೃತ ವ್ಯಕ್ತಿಯ ದೇಹವನ್ನು ಹೊರತೆಗೆದು ನೋಡಿದಾಗ ಅದು ಬಿಳಿ ಬಟ್ಟೆಯಿಂದ ಸುತ್ತಿದ್ದು, ನಂತರ ಸದರಿ ಬಿಳಿ ಬಟ್ಟೆಯನ್ನು ತೆಗೆದು ನೋಡಿದಾಗ ಮೃತ ಶರೀರದ ಮೇಲೆ ಒಂದು ಬಿಳಿ ಮತ್ತು ನೀಲಿ ಬಣ್ಣದ ಶರ್ಟ, ಒಂದು ಅಡಲ್ಟ್ ಡೈಪರ್, ಎಡಕುಂಡಿ ಮತ್ತು ತೊಡೆಯ ಮೇಲೆ ಆಸ್ಪತ್ರೆಯ ಬ್ಯಾಂಡೇಜ್ ಇತ್ತು. ನಂತರ ಸದರಿ ದೇಹವನ್ನು ನೀರಿನಿಂದ ತೊಳೆದು ನೋಡಿದಾಗ ಅಲ್ಲಲ್ಲಿ ಮೂಳೆಗಳು ಕಾಣುತ್ತಿದ್ದವು. ಸದರಿ ದೇಹವು ಸುಮಾರು 18 ವರ್ಷದ ಯುವಕನದಾಗಿತ್ತು. ಸದರಿ ಮೃತ ದೇಹದ ಉದ್ದ 175 ಸೆಂ.ಮೀ ಇತ್ತು. ಅಲ್ಲಲ್ಲಿ ಮಾಂಸಖಂಡಗಳು ಮೂಳೆಗೆ ಅಂಟಿಕೊಂಡಿದ್ದವು. ನಂತರ ಅಸ್ಪತ್ರೆಯ ಬ್ಯಾಂಡೇಜನ್ನು ತೆಗೆದು ನೋಡಿದಾಗ ಸದರಿ ಎಡಕುಂಡಿಯ ಚರ್ಮ ಮತ್ತು ಮಾಂಸವು ಕೊಳೆತಿದ್ದು ಬಣ್ಣ ಮಾಸಿತ್ತು. ಸದರಿ ಮೃತ ಶರೀರದ ಕೂದಲನ್ನು ಎಳೆದಾಗ ಅದು ಸುಲಭವಾಗಿ ಕಿತ್ತುಬರುತ್ತಿತು. ನಂತರ ಸದರಿ ಮೃತದೇಹವನ್ನು ಛೇದಿಸಿ ನೋಡಿದಾಗ ತಲೆಬುರುಡೆ ಇಂಟ್ಯಾಕ್ಟ ಇತ್ತು. ದೇಹದ ಇತರ ಒಳಭಾಗಗಳು ಕೊಳೆತು ಹೋಗಿದ್ದವು. ನಂತರ ಸದರಿ ಮೃತದೇಹ ಊಳಿದ್ದ ಜಾಗದ ಮೇಲ್ಭಾಗ ಮತ್ತು ಕೆಳಭಾಗದ ಮಣ್ಣನ್ನು ಹಾಗೂ ಸದರಿ ಮೃತದೇಹದಲ್ಲಿದ್ದ ಹಳದಿ ಕಪ್ಪು ಬಣ್ಣದ ಮಾಂಸವನ್ನು, ಎಡ ಮತ್ತು ಬಲಕುಂಡಿಯ ಕೊಳೆತ ಮಾಂಸವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಸ್ಥಳದಲ್ಲಿ ಸೀಲು ಮಾಡಿ ಅದನ್ನು ತನಿಖಾಧಿಕಾರಿಗೆ ಹಸ್ತಾಂತರಿಸಿರುತ್ತೇನೆ. ಅದೇ ದಿನ ನಾನು ಪ್ರಾವಿಷನಲ್ ಒಪಿನಿಯನ್ ನೀಡಿದ್ದು, ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಮತ್ತು ಆಸ್ಪತ್ರೆಯ ಕೇಸುಶೀಟನ್ನು ಪಡೆಯಲು ಅಂತಿಮ ವರದಿಯನ್ನು ಕಾಯ್ದಿರಿಸಿರುತ್ತೇನೆ. ನಂತರ ಎಫ್.ಎಸ್.ಎಲ್ ವರದಿ ಮತ್ತು ಆಸ್ಪತ್ರೆಯ ಕೇಸು

ಶೀಟನ್ನು ಪರಿಶೀಲಿಸಿ ಸಾವಿನ ನಿಖರ ಕಾರಣವನ್ನು ಹೇಳಲು ಸಾಧ್ಯವಿಲ್ಲ, ಆದರೆ ಸದರಿ ವ್ಯಕ್ತಿಗೆ ಇಂಜಕ್ಷನ್ ಕೊಟ್ಟಿರುವುದರಿಂದ ತೀರಿಕೊಂಡಿರಬಹುದು ಎಂದು ನನ್ನ ಅಭಿಪ್ರಾಯ ನೀಡಿರುತ್ತೇನೆ. ಸಾಕ್ಷಿದಾರರು ಸದರಿ ಪಿ.ಎಂ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ20 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ20 ಎ ಎಂದು ಗುರುತಿಸಲಾಯಿತು. ಎಫ್.ಎಸ್.ಎಲ್ ವರದಿಯನ್ನು ತನಿಖಾಧಿರವರು ನನ್ನ ಮುಂದೆ ಹಾಜರುಪಡಿಸಿದ್ದು ಅದರ ಆಧಾರದ ಮೇರೆಗೆ ಪಿ.ಎಂ ವರದಿಯನ್ನು ನೀಡಿರುತ್ತೇನೆ. ಸಾಕ್ಷಿದಾರರು ಸದರಿ ಎಫ್.ಎಸ್.ಎಲ್ ವರದಿನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ21 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ21 ಎ ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ</u>

ಶವಪರೀಕ್ಷೆ ಮಾಡುವ ಬಗ್ಗೆ ಪಿ.ಎಸ್.ಐ ರವರು ನೋಟಿಸ್ ನೀಡಿದ್ದರು. ಶವಪರೀಕ್ಷೆ ಮಾಡಲು ನಾನು, ಇನ್ನೊಬ್ಬ ವೈದ್ಯರು ಹಾಗೂ ಅಟೆಂಡರ್ ಬಂದಿದ್ದೆವು. ಶವ ಪರೀಕ್ಷೆ ಮಾಡಿದ ಸಮಯದಲ್ಲಿ ಅಂದಾಜು 20 ರಿಂದ 50 ಜನ ಇದ್ದರು. ಶವವನ್ನು ಅಂತ್ಯ ಸಂಸ್ಕಾರ ಮಾಡಿದ ಸ್ಥಳದಿಂದ ಹೊರತೆಗೆದಾಗ ಪೋಲಿಸರು ಮಹಜರು ಮಾಡಿರುತ್ತಾರೆ. ಸದರಿ ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಮೃತದೇಹದ ಮೇಲೆ ಇದ್ದ ಬಟ್ಟೆಗಳು ಹಾಗೂ ಆಸ್ಪತ್ರೆಯ ಬ್ಯಾಂಡೇಜನ್ನ ಪೋಲಿಸರು ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ವ್ಯಕ್ತಿಯು ಯಾವುದಾದರೂ ಖಾಯಿಲೆಯಿಂದ ತೀರಿಕೊಂಡಿರಬಹುದು ಎಂದರೆ ಸಾಕ್ಷಿದಾರರು ಮೃತದೇಹ ಕೊಳೆತಿದ್ದರಿಂದ ಹೇಳಲು ಆಗುವುದಿಲ್ಲ ಎನ್ನುವರು.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ